ಶ್ರೀಮತಿ ಬಿ.ಟಿ. ಲಲಿತಾನಾಯಕ್ (ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಮಂತ್ರಿಗಳು) :

ಅ. ಕನ್ನಡ ಭಾಷೆಯನ್ನು ಆಡಳಿತದ ಎಲ್ಲಾ ಹಂತದಲ್ಲೂ ಕಡ್ಡಾಯವಾಗಿ ಜಾರಿ ಮಾಡಬೇಕೆಂಬುದು ಸರ್ಕಾರದ ದೃಢ ನಿಲುವಾಗಿದೆ.

ಆ. ಸರೋಜಿನಿ ಮಹಿಷಿ ವರದಿಯನ್ನು ಸರ್ಕಾರವು ಒಪ್ಪಿ ಅಂಗೀಕರಿಸಿದೆ ಮತ್ತು ಸಮಿತಿಯು ಶಿಫಾರಸುಗಳನ್ನು ಪರಿಣಾಮಕಾರಿಯಾಗಿ ಜಾರಿ ಮಾಡಲಾಗುತ್ತಿದೆ.

ವಿಷಯ ರಾಜ್ಯದಲ್ಲಿನ ಸಕ್ಕರೆ ಕಾರ್ಖಾನೆಗಳ ವಿವರ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 729(533)

ಶ್ರೀ ಕೆ.ಎಸ್. ಪುಟ್ಟಣಯ್ಯ (ಪಾಂಡವಪುರ) : ಮಾನ್ಯ ಸಕ್ಕರೆ, ಜವಳಿ, ವಿಜ್ಞಾನ ಪರಿಸರ ಮಾಲಿನ್ಯ ರಾಜ್ಯ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ. ರಾಜ್ಯದಲ್ಲಿ ಸಕ್ಕರೆ ಕಾರ್ಖಾನೆಗಳು ಎಷ್ಟಿವೆ ಅವುಗಳಲ್ಲಿ ಸಹಕಾರಿ ಕ್ಷೇತ್ರ, ಜಂಟಿ ಕ್ಷೇತ್ರ ಖಾಸಗಿ ಕ್ಷೇತ್ರ ಇವುಗಳ ಪ್ರತಿಯೊಂದರ ಸಂಖ್ಯೆ ಎಷ್ಟು

ಆ. ಸಹಕಾರಿ ಕ್ಷೇತ್ರದಲ್ಲಿ ಸರ್ಕಾರಿ ಹಸ್ತಕ್ಷೇಪ ಇಲ್ಲದೆ ಮಹಾರಾಷ್ಟ್ರದ ಮಾದರಿ ಸಹಕಾರಿ ಕಾನೂನನ್ನು ತಿದ್ದುಪಡಿ ಮಾಡುವ ಬಗ್ಗೆ ಸರ್ಕಾರದವರು ಆಲೋಚಿಸಿರುವರೆ

ಶ್ರೀ ಪಿ.ಸಿ. ಸಿದ್ದನಗೌಡರ್ (ಸಕ್ಕರೆ, ಜವಳಿ, ವಿಜ್ಞಾನ, ಯಂತ್ರಕರೆ, ಪರಿಸರ ಹಾಗೂ ಜೀವಪರಿಸ್ಥಿತಿ ಶಾಸ್ತ್ರ ರಾಜ್ಯ ಸಚಿವರು):

ಅ. ರಾಜ್ಯದಲ್ಲಿ 30 ಸಕ್ಕರೆ ಕಾರ್ಖಾನೆಗಳಿವೆ. ಅವುಗಳ ಕ್ಷೇತ್ರವಾರು ವಿವರ ಈ ಕೆಳಕಂಡಂತೆ ಇದೆ.

ಸಹಕಾರಿ ಕ್ಷೇತ್ರ	-	17
ಸಾರ್ವಜನಿಕ ಕ್ಷೇತ್ರ	-	2
ಜಂಟಿ ಕ್ಷೇತ್ರ	-	2
ಖಾಸಗಿ ಕ್ಷೇತ್ರ	-	9
ಒಟ್ಟು		30

ಆ. ಕರ್ನಾಟಕ ಸಹಕಾರಿ ಸಂಘಗಳ ಕಾಯ್ದೆಗೆ ಮಹರಾಷ್ಟ್ರ ಸಹಕಾರಿ ಸಂಘಗಳ ಕಾಯ್ದೆಯ ಮಾದರಿಯ ತಿದ್ದುಪಡಿ ಮಾಡುವ ಬಗ್ಗೆ ಯಾವುದೇ ಪ್ರಸ್ತಾವ ಸರ್ಕಾರದ ಮುಂದಿರುವುದಿಲ್ಲ.

ವಿಷಯ : ಬಾದಾಮಿ ಹಾಗೂ ಕೆರೂರು ಪಟ್ಟಣಗಳಿಗೆ ಕುಡಿಯುವ ನೀರಿನ ಯೋಜನೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 730 (355)

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬಾದಾಮಿ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ